ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ದುಷ್ಯಂತ ನಾಡಗೌಡ ಅವರ ಓದು ಮತ್ತು ಅಧ್ಯಯನ ವಿಸ್ತಾರವಾದುದು. ಧಾರವಾಡ ಹುಟ್ಟೂರು. ವಿಮರ್ಶೆ ಮತ್ತು ಸಮೀಕ್ಷಾ ಕೃತಿಗಳ ಜೊತೆಗೆ ಹಿರಿಯ ಸಂಶೋಧಕ ನಾ.ಶ್ರೀ. ರಾಜಪುರೋಹಿತರ ಅಧ್ಯಯನಗಳ ಕುರಿತೂ ಪುಸ್ತಕ ಬರೆದಿದ್ದಾರೆ. ಇತ್ತೀಚೆಗೆ 'ನಿರ್ಮಲೆ' ಎಂಬ ಕಥಾಸಂಕಲನ ಪ್ರಕಟಿಸಿದ್ದಾರೆ.

ಗೋದೂಬಾಯಿ ಆಯ್ದ ನಾಲ್ಕೈದು ಜನರಿಗೆ ಅಡುಗೆ ಮಾಡಿ ಊಟಕ್ಕೆ ಹಾಕುತ್ತಿದ್ದರು. ರಾಜಪುರೋಹಿತರು ಊಟ ಮಾಡಿಕೊಂಡು ವಾಚನಾಲಯಕ್ಕೆ ಓದಲು ಹೋಗುತ್ತಿದ್ದರು. ಅಂದಿನ ಧಾರವಾಡದ ಒಬ್ಬ ಸುಶಿಕ್ಷಿತ, ಸುಸಂಸ್ಕೃತ, ಜನೋಪಯೋಗಿ ವ್ಯಕ್ತಿ ಗುರುನಾಥ ಘಾಟಕರು ಈ ವಾಚನಾಲಯಕ್ಕೆ ತಮ್ಮ ಪುಸ್ತಕಗಳನ್ನೆಲ್ಲ ದಾನವಾಗಿ ಕೊಟ್ಟಿದ್ದರು. ಇವುಗಳಲ್ಲಿಯ ಇತಿಹಾಸಕ್ಕೆ (ಮಹಾರಾಷ್ಟ್ರ ಹಾಗೂ ಬಂಗಾಲದ) ಸಂಬಂಧಿಸಿದ ಹಾಗೂ ಸಂಶೋಧನೆಗೆ ಸಂಬಂಧಿಸಿದ ಎಲ್ಲ ಪುಸ್ತಕಗಳನ್ನೂ ಓದಿ ರಾಜಪುರೋಹಿತರು ಮನನ ಮಾಡಿಕೊಂಡಿದ್ದರು. ಅವರ ಜೀವನದ ಉದ್ದೇಶದ ಪಕ್ಕಾ ಹೊಳಹುಗಳು ಇಲ್ಲಿಯೇ ನಿರ್ಧಾರವಾದವು. 1910ರಲ್ಲಿ ಅನ್ನಪೂರ್ಣೇಶ್ವರಿ ಗೋದೂಬಾಯಿ ತೀರಿಕೊಂಡರು. ಮೊದಲೇ ನಿರ್ಧರಿಸಿದಂತೆ ರಾಜಪುರೋಹಿತರು ಕಾಶಿಯಲ್ಲಿಯ 'ಭಾರತ ಧರ್ಮ ಮಹಾಮಂಡಲ'ಕ್ಕೆ ಹೋಗಿ, ಅಲ್ಲಿ ಎರಡು ವರ್ಷ ಇದ್ದು ಅಧ್ಯಯನಗೈದು 1912ರಲ್ಲಿ ಪುಣೆಗೆ ತಿರುಗಿ ಬಂದರು. ಕೆಲ ದಿನ ಬರೋಡಾಕ್ಕೆ ಹೋಗಿ ಅಲ್ಲಿಯೂ ಇದೇ ವಿಷಯದ ಅಭ್ಯಾಸ ಮಾಡಿದರು.

ಈಗ ರಾಜಪುರೋಹಿತರ ಮೊದಲ ಮಹತ್ವದ ಸಂಶೋಧನೆಯ ಕಾಲ ಕೂಡಿ ಬಂದಿತ್ತು. ಜೊತೆಗೆ ಲೋಕಮಾನ್ಯ ಟಿಳಕರ ಸಂಪಾದಕತ್ವದಲ್ಲಿ ಪ್ರಕಟಗೊಳ್ಳುತ್ತಿದ್ದ ಪ್ರಸಿದ್ಧ 'ಕೇಸರಿ'ಯಲ್ಲಿ ಒಂದು ಅವಕಾಶವೂ ಕೂಡಿಬಂತು. 'ಕೇಸರಿ'ಯಲ್ಲಿ 20 ಆಗಸ್ಟ್ 1912ರಂದು, ರಾಜಪುರೋಹಿತರು ಬರೆದ 'ಕರ್ನಾಟಕ ವ ಮಹಾರಾಷ್ಟ್ರ' ಲೇಖನ ಪ್ರಕಟವಾಯಿತು. ಇಂತಹ ಆರು ಲೇಖನಗಳಲ್ಲಿ ಕೊನೆಯದು 6 ಜುಲೈ 1913ರಲ್ಲಿ ಪ್ರಕಟವಾಯಿತು. ಮೊದಲ ಲೇಖನದಲ್ಲಿ ಮರಾಠಿ ವಿದ್ವಾಂಸರಾದ ಆರ್. ಜಿ. ಭಂಡಾರಕರ, ವಿ.ಕೆ. ರಾಜವಾಡೆ ಮತ್ತು ಸಿ.ವಿ. ವೈದ್ಯ ಪ್ರಭೃತಿಗಳು 'ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ'ಗಳ ಬಗೆಗೆ ಮಾಡಿದ ತಪ್ಪು ತಿಳಿವಳಿಕೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅದನ್ನು ಕಿತ್ತೆಸೆಯಲು ಮೊದಲ ಲೇಖನದಲ್ಲಿ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಮೊದಲನೆಯದು ಕ್ರಿ.ಶ. 639ರಲ್ಲಿ ಬಾದಾಮಿ(ವಾತಾಪಿ)ಯಲ್ಲಿ ಎರಡನೇ ಪುಲಿಕೇಶಿಯನ್ನು ಭೆಟ್ಟಿಯಾದ ಚೀನಿ ಯಾತ್ರಿಕ ಹ್ಯೂಯೆನ್ ತ್ಸಾಂಗ್ ಚಾಲುಕ್ಯರ ರಾಷ್ಟ್ರವನ್ನು 'ಮೊಹೊಲಕ್ಕು' ಎಂದು ಕರೆದಿದ್ದಾನೆ. 'ಮೊಹೊಲಕ್ಕು' ಅಂದರೆ ಮಹಾರಾಷ್ಟ್ರ ಎಂದು ಮರಾಠಿ ವಿದ್ವಾಂಸರು ಪ್ರತಿಪಾದಿಸಿದ್ದನ್ನು, 'ಮಹಾರಾಷ್ಟ್ರ' ಎಂದರೆ ಇಂದಿನ ಮರಾಠಿ ಭಾಷೆ ಮಾತನಾಡುವವರ ಮಹಾರಾಷ್ಟ್ರ ಅಲ್ಲ ಎಂದೂ, ಮಹಾರಾಷ್ಟ್ರ ಎಂದರೆ 'ದೊಡ್ಡ ನಾಡು' ಎಂತಲೂ, ಚಾಲುಕ್ಯರು ಹುಟ್ಟಿನಿಂದ ಕನ್ನಡಿಗರೆಂದೂ ಇಲ್ಲಿ ಸಿದ್ಧಮಾಡಿ ತೋರಿಸುತ್ತಾರೆ. ಇದರ ಜೊತೆಗೇ ಬಾಬು ಮುಜುಂದಾರ್ ಎಂಬ ಸಂಶೋಧಕರು 'ಮಾಡರ್ನ್ ರಿವ್ಯೂ'ದ ಜೂನ್ 1912ರ ಸಂಚಿಕೆಯಲ್ಲಿ ಬರೆದದ್ದನ್ನು ಎತ್ತಿ ತೋರಿಸುತ್ತಾರೆ. ಮುಜುಂದಾರ್ ಬರೆದ ವಾಕ್ಯಗಳನ್ನು ಕನ್ನಡಕ್ಕೆ ಈ ರೀತಿ ಅನುವಾದಿಸಬಹುದು. "ಕರ್ನಾಟಕದ ಜನರು ಬಹು ಪ್ರಾಚೀನ ಕಾಲದಿಂದ ಸುಧಾರಿಸಿದವರಾಗಿದ್ದರು ಮತ್ತು ಕನ್ನಡ ಭಾಷೆ ಪ್ರೌಢತೆಯನ್ನು ಪಡೆದಿತ್ತು... ಚಾಲುಕ್ಯರ ಕಾಲದಲ್ಲಿ ಕನ್ನಡ ಜನ ಮತ್ತು ಕನ್ನಡ ಭಾಷೆ ಅತ್ಯಂತ ಉನ್ನತ ಅವಸ್ಥೆಯಲ್ಲಿದ್ದವು." ಉಳಿದ ಐದು ಲೇಖನಗಳಲ್ಲಿ ಕನ್ನಡ ಹೇಗೆ ಕೊಲ್ಲಾಪುರ, ಸಾತಾರಾ, ಸೊಲ್ಲಾಪುರ ಸೀಮೆಗಳನ್ನು ದಾಟಿಹೋಗಿತ್ತು. ಮುಖ್ಯವಾಗಿ ಜೈನರು ಈ ಭಾಗದಲ್ಲಿದ್ದು ಅವರೆಲ್ಲ ಕನ್ನಡಿಗರು ಹಾಗೂ ಇಂದಿಗೂ ಅಲ್ಲಿಯ ಕೆಲ ಧಾರ್ಮಿಕ ಸಂಸ್ಥೆಗಳು ಕನ್ನಡ ಭಾಷೆಯನ್ನುಪಯೋಗಿಸುತ್ತವೆ ಎನ್ನುವುದರ ಬಗ್ಗೆ ಮಾಹಿತಿಗಳಿವೆ.

ಪುಣೆಯಲ್ಲಿಯ 'ಭಾರತೀಯ ಇತಿಹಾಸ ಸಂಶೋಧನ ಮಂಡಳ'ಕ್ಕೆ ಆಲೂರು ಅವರು ಹಾಗೂ